# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 190-ಮಂಗಮ್ಮನಪಾಳ್ಯ

### ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಸ.ಕಾ.ನಿ.ಅ (ಬೃಹತ್ ಮಳೆನೀರುಗಾಲುವೆ) ರವರು ದಿನಾಂಕ: 06.12.2022 ಮಂಗಳವಾರ ಮಧ್ಯಾಹ್ನ 11.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಂಖ್ಯೆ: 190ರ ಹೆಚ್.ಎಸ್.ಆರ್ ಉಪವಿಭಾಗ (ವಾರ್ಡ್ ಕಛೇರಿ) 9ನೇ ಮುಖ್ಯ ರಸ್ತೆ, 14ನೇ ಅಡ್ಡ ರಸ್ತೆ, 6ನೇ ಸೆಕ್ಟರ್, ಹೆಚ್.ಎಸ್.ಆರ್ ಬಡಾವಣೆ, ಬೆಂಗಳೂರು-560102,ರಲ್ಲಿ ನಡೆಸಿದ ವಾರ್ಡ್ ಸಂಖ್ಯೆ: 190-ಮಂಗಮ್ಮನಪಾಳ್ಯ, ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಹಾಜರಿದ್ದ ಅಧ್ಯಕ್ಷರು/ನೋಡಲ್ ಅಧಿಕಾರಿಗಳು, ಸಹಾಯಕ ಅಭಿಯಂತರರು / ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಟಿ ಹನುಮಂತರಾಯ | ವಾರ್ಡ್ ನೋಡಲ್ ಅಧಿಕಾರಿ, ಸ.ಕಾ.ನಿ.ಅ (ಬೃಹತ್ ಮಳೆನೀರುಗಾಲುವೆ) | 8105005285 |
| 2 | ಶ್ರೀ ರಾಜಗೋಪಾಲ್ ಬಾಬು.ಎನ್ | ಕಾರ್ಯದರ್ಶಿ/ಸಹಾಯಕ ಅಭಿಯಂತರರು ವಾರ್ಡ್ ಸಂ.190 | 9480688190 |
| 3 | ಶ್ರೀ ಗೋಪಿನಾಥ್ | ಸದಸ್ಯರು | 9243111520 |
| 4 | ಶ್ರೀ ಟಿ.ಎ ಮೌಲಸಾಬ್ | ಸಾರ್ವಜನಿಕರು | 990034140 |
| 5 | ಶ್ರೀನಿವಾಸ | ಸಾರ್ವಜನಿಕರು | 9845284081 |
| 6 | ಶ್ರೀ ಶಂಕರ | ಸಾರ್ವಜನಿಕರು | 9886899848 |
| 7 | ಶ್ರೀ ವಿಕಾಸ್ ಡಿ. ಎಸ್ | ಸಹಾಯಕ ಅಭಿಯಂತರರು (ಬಿ.ಡಬ್ಲ್ಯು.ಎಸ್.ಎಸ್.ಬಿ) | 9845444039 |
| 8 | ಶ್ರೀ ಈರಣ್ಣ | ಪೋಲಿಸ್ ಇನ್ಸ್‌ಪೆಕ್ಟರ್, ಬಂಡೇಪಾಳ್ಯ | 9449067308 |
| 9 | ಶ್ರೀ ಸಿರಾಜ್ ಅಹಮ್ಮದ | ಎ.ಎಸ್.ಐ ಸಂಚಾರಿ ಪೋಲಿಸ್ ಠಾಣೆ ಎಲೆಕ್ಟ್ರಾನಿಕ್ ಸಿಟಿ | 9343585394 |
| 10 | ಶ್ರೀ ಬಾಲಾಜಿ ಸಿ.ಜಿ | ಕಿರಿಯ ಅಭಿಯಂತರರು, ಬೆಸ್ಕಾಂ | 9900052526 |
| 11 | ಶ್ರೀ ಜಟ್ಟಪ್ಪ ಜಿ.ಎಸ್. | ಫೀಲ್ಡ್ ಅಕೌಂಟೆಂಟ್ (ರಾಜಸ್ವ ಇಲಾಖೆ) | 9741944144 |
| 12 | ಶ್ರೀ ನಟರಾಜ್ ಹೆಚ್.ವಿ | ಕಂದಾಯ ಪರಿವೀಕ್ಷಕರು ವಾ ಸಂ. 190 | 9448574662 |
| 13 | ಶ್ರೀ ಶ್ರೀಧರ ಎನ್ | ಪಶುಸಂಗೋಪನೆ ನಿರೀಕ್ಷಕರು | 9035444953 |
| 14 | ಶ್ರೀ ಹೊನ್ನೂರು ಬಾಷ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾಸಂ.190 | 9480688490 |
| 15 | ಶ್ರೀ ಚೇತನ ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾಸಂ.190 | 8553128980 |
| 16 | ಶ್ರೀ ಎಸ್.ಜಿ ನಾರಾಯಣಪ್ಪ | ತೋಟಗಾರಿಕೆ ನಿರೀಕ್ಷಕರು | 9739063379 |
| 17 | ಶ್ರೀ ಆಸೀಫ್ ಪಾಷ | ಬೀದಿ ದೀಪ ದುರಸ್ಥಿ/ನಿರ್ವಹಣೆ | 7619651319 |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ, ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸುತ್ತಾ, ಸಭೆಗೆ ಬೃಹತ್ ಮಳೆ ನೀರುಗಾಲುವೆ ಸಹಾಯಕ ಅಭಿಯಂತರರು, ಬೀದಿ ದೀಪ ನಿರ್ವಹಣೆ (ವಿದ್ಯುತ್) ಸ.ಅ. ರವರುಗಳು ಸಭೆಗೆ ಗೈರು ಹಾಜರಾಗಿರುವ ಸದಸ್ಯರು ಸಭೆಯಲ್ಲಿ ಆಕ್ಷೇಪಿಸಿದ್ದು, ನೋಡಲ್ ಅಧಿಕಾರಿಗಳು ಕಾರಣ ಕೇಳಿ ನೋಟೀಸ್ ಜಾರಿ ಮಾಡುವಂತೆ ಕಾರ್ಯದರ್ಶಿಗಳಿಗೆ ಸೂಚಿಸಿ, ಸಭೆಯನ್ನು ಆರಂಭಿಸಲಾಯಿತು.

(2...)

Scanned with

- **ರಾಜಸ್ವ ಇಲಾಖೆ :-**

2. ಹಿಂದಿನ ಹಲವು ಸಭೆಗಳಲ್ಲಿ ಚರ್ಚಿಸಿರುವ ವಿಷಯಗಳನ್ನು ಇಂದಿನ ಸಭೆಯಲ್ಲಿ ಪ್ರಸ್ತಾಪಿಸಿದ್ದು, ವಾರ್ಡ್ ವ್ಯಾಪ್ತಿಯಲ್ಲಿ ಬರುವ ಸರ್ವೆ ಸಂ. 45/1, ಬಂಡೇಪಾಳ್ಯ, ಗಾರ್ವೆಭಾವಿಪಾಳ್ಯ, ರಾಜುಕಾಲುವೆ ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಿಸಿರುವ ಬಗ್ಗೆ ಹಾಗೂ ಸರ್ವೆ ಸಂಖ್ಯೆ: 43 ಬಂಡೇಪಾಳ್ಯ 3 ಎಕರೆ ಜಾಗದಲ್ಲಿ ಕೆಲವು ಖಾಸಿಗೆ ವ್ಯಕ್ತಿಗಳು ಕಾಂಪೌಂಡ್ ಗೋಡೆ ನಿರ್ಮಿಸಿದ್ದು, ಇದರ ಪೈಕಿ 1 ಎಕರೆ ಶ್ರೀ ರಾಮ ದೇವಸ್ಥಾನ ನಿರ್ಮಿಸಲು ಮೀಸಲಿಟ್ಟಿರುವ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದು, ಈ ಜಾಗವನ್ನು ಹದ್ದುಬಸ್ತು ಮಾಡಲು ಶ್ರೀ ಮೌಲಸಾಬ್ ರವರು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ಶ್ರೀ ಜಟ್ಟಪ್ಪ ವಿಲೇಜ್ ಅಕೌಂಟೆಂಟ್ ರವರು ಮೌಖಿಕವಾಗಿ ಸಭೆಯಲ್ಲಿ ತಿಳಿಸಿರುತ್ತೀರಿ ಈ ಬಗ್ಗೆ ನಮ್ಮ ಇಲಾಖೆಗೆ ಪತ್ರ ಬರೆಯಿರಿ ಮೇಲಾಧಿಕಾರಿಗಳ ಗಮನಕ್ಕೆ ತಂದು ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

- **ಬೃಹತ್ ಮಳೆ ನೀರುಗಾಲುವೆ :-**

1. ಹಿಂದಿನ ಸಭೆಯ ದಿನಾಂಕ: 17.09.2022 ರಂದು ನಡೆಸ ಸಭೆಗೆ ಶ್ರೀ ವಿಕ್ರಾಂತ್ ರವರು ಗೈರು ಹಾಜರಾಗಿರುವ ಸಂಬಂಧ ನೋಡಲ್ ಅಧಿಕಾರಿಗಳು ಕಾರಣ ಕೇಳಿ ನೋಟಿಸ್ ಜಾರಿ ಮಾಡಲು ದಿನಾಂಕ: 07.11.2022 ರಂದು ನಡೆದ ಸಭೆಯಲ್ಲಿ ಕಾರ್ಯದರ್ಶಿಗಳಿಗೆ ಸೂಚಿಸಿರುವ ಹಿನ್ನಲೆಯಲ್ಲಿ ನೋಟೀಸ್ ಜಾರಿಗೊಳಿಸಲಾಗಿದೆ. ಹಾಗೂ ಇಂದಿನ ಸಭೆಗೂ ಕೂಡ ಶ್ರೀ ವಿಕ್ರಾಂತ್ ಸಭೆಗೆ ಗೈರು ಹಾಜರಾಗಿರುತ್ತಾರೆ. ಈ ಬಗ್ಗೆ ಕಾರ್ಯದರ್ಶಿಗಳಿ ದೂರವಾಣಿ ಮುಖಾಂತರ ಕರೆ ಮಾಡಿ ಸಭೆಗೆ ಗೈರು ಹಾಜರಾಗಿರುವ ಬಗ್ಗೆ ವಿಚಾರಿಸಿದಾಗಿ ತುರ್ತು ಕಾರ್ಯದ ಹಿನ್ನಲೆಯಲ್ಲಿ ಕಾಮಗಾರಿ ಸ್ಥಳದಲ್ಲಿ ಇದ್ದನೆ ಮುಂದಿನ ಸಭೆಗೆ ಹಾಜರಾಗುವುದಾಗಿ ತಿಳಿಸಿರುತ್ತಾರೆ.
2. ಮಂಗಮ್ಮನಪಾಳ್ಯ ಮುಖ್ಯ ರಸ್ತೆಯ ಬಲಭಾಗದಲ್ಲಿ ಬೃಹತ್ ನೀರುಗಾಲುವೆ ಚರಂಡಿಯಲ್ಲಿ ತುಂಬಿಕೊಂಡಿರುವ ಹೂಳೆತ್ತುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ಮೌಲಸಾಬ್ ರವರು ಶ್ರೀ ವಿಕ್ರಾಂತ ಸ.ಅ. ರವರ ಗಮನಕ್ಕೆ ತುಂದು ತುರ್ತಾಗಿ ಕ್ರಮ ಕೈಗೊಳ್ಳುವಂತೆ ನೋಡಲ್ ಅಧಿಕಾರಿಗಳ ಗಮನಕ್ಕೆ ತಂದು ಈ ಬಗ್ಗೆ ಸಂಬಂಧ ಪಟ್ಟ ಸಹಾಯಕ ಅಭಿಯಂತರರಿಗೆ ಸೂಚಿಸಲಾಗುವುದೆಂದು ಸಭೆಯಲ್ಲಿ ನೋಡಲ್ ಅಧಿಕಾರಿಗಳು ತಿಳಿಸಿರುತ್ತಾರೆ.
3. ವಾರ್ಡ್ ವ್ಯಾಪ್ತಿಯಲ್ಲಿ ರಾಜುಕಾಲುವೆ/ಒಳಚರಂಡಿ ಮುಖಾಂತರ ಕೊಳಚೆ ನೀರು ಹೊಸಪಾಳ್ಯ ಕೆರೆ ಮತ್ತು ಮಂಗಮ್ಮನಪಾಳ್ಯ ಕೆರೆಗೆ ಸೇರಿ ಕೆರೆಯ ನೀರು ಮಾಲಿನ್ಯವಾಗುತ್ತಿದ್ದು, ಇದರಿಂದ ಸ್ಥಳೀಯರಿಗೆ ಮತ್ತು ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀಳುವ ಸಾಧ್ಯತೆಯಿರುತ್ತದೆ. ಆದ್ದರಿಂದ ಕೂಡಲೇ ರಾಜುಕಾಲುವೆ/ಒಳಚರಂಡಿ ನೀರನ್ನು ಕೆರೆಗೆ ಹರಿಯದಂತೆ ತಡೆಯಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಶ್ರೀ ಶ್ರೀನಿವಾಸ ರೆಡ್ಡಿ, ಗೋಪಿನಾಥ, ಚಂದ್ರರೆಡ್ಡಿ ರವರುಗಳು ಸಭೆಯ ಗಮನಕ್ಕೆ ತಂದಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ವಿಕಾಸ್ ಸ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಸ್ಥಳವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ.

- **ಬೆಸ್ಕಾಂ :-**

1. ಹಿಂದಿನ ಸಭೆಯ ದಿನಾಂಕ: 07.11.2022 ರಂದು ವಾರ್ಡ್ ವ್ಯಾಪ್ತಿಯ ಉಜಾಲಾ ಫ್ಯಾಕ್ಟರಿ ಹತ್ತಿರ, ರಸ್ತೆ ಅಗಲೀಕರಣಕ್ಕಾಗಿ ಜಾಗ ಬಿಟ್ಟಿದ್ದು, ರಸ್ತೆ ಬದಿಗಳಲ್ಲಿರುವ ಕಂಬಗಳನ್ನು ಸ್ಥಳಾಂತರಿಸಲು ಹಲವು ಬಾರಿ ಸಭೆಯ ಗಮನಕ್ಕೆ ತಂದರು ಸಹ ಕ್ರಮ ಕೈಗೊಂಡಿರುವುದಿಲ್ಲವೆಂದು ಸಭೆಯಲ್ಲಿ ತೀವ್ರವಾಗಿ ಆಕ್ಷೇಪಿಸಿದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಕಿರಿಯ ಅಭಿಯಂತರರು, ಬೆಸ್ಕಾಂ ರವರು ಈ ಬಗ್ಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಅಂದಾಜು ಪಟ್ಟಿ ಅನುಮೋದನೆಗೊಂಡ ನಂತರ ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

- **ತೋಟಗಾರಿಕೆ :-**

1. ಹಿಂದಿನ ಸಭೆಯ ದಿನಾಂಕ: 07.11.2022 ರಂದು ವಾರ್ಡ್ ವ್ಯಾಪ್ತಿಯ ಮಂಗಮ್ಮನಪಾಳ್ಯ ವ್ಯಾಪ್ತಿಯ ಐ.ಟಿ.ಐ ಉದ್ಯಾನವನವನ್ನು ಅಭಿವೃದ್ಧಿ ಪಡಿಸುವಂತೆ ಹಾಗೂ ಉದ್ಯಾನವನದ ಭದ್ರತಾ ಸಿಬ್ಬಂದಿ ರವರಿಗೆ ಶೌಚಾಲಯ ಸೌಲಭ್ಯವಿಲ್ಲದಿರುವುದರಿಂದ E-Toilet ಅಥವ ಶೌಚಾಲಯ ನಿರ್ಮಿಸಲು ಗೋಪಿನಾಥ ರವರು ಪ್ರಸ್ತಾಪಿಸಿದರು. ಈ ಬಗ್ಗೆ ಇಂದಿನ ಸಭೆಗೆ ತೋಟಗಾರಿಕೆ ನಿರೀಕ್ಷಕರು ರವರು ಗೈರು ಹಾಜರಾಗಿರುತ್ತಾರೆ. ರವರ ಪರವಾಗಿ ಸಭೆಗೆ ಹಾಜರಿದ್ದ ಶ್ರೀ ನರಸಪ್ಪ ತೋಟಗಾರಿಕೆ ನಿರೀಕ್ಷಕರು ಅಭಿವೃದ್ಧಿ ಕಾಮಗಾರಿ ಪ್ರಗತ್ತಿಯಲ್ಲಿದ್ದು, ಮುಂದಿನ 15-20 ದಿನಗಳಲ್ಲಿ ಕಾರ್ಯರೂಪಕ್ಕೆ ತರಲಾಗುವುದೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

(3...)

Scanned with

- **<u>ಸಂಚಾರಿ ವಿಭಾಗ (ಎಲೆಕ್ಟ್ರಾನಿಕ್ ಸಿಟಿ ಪೋಲಿಸ್ ಠಾಣೆ) :-</u>**

1. ವಾರ್ಡ್ ವ್ಯಾಪ್ತಿಯ ಮಂಗಮ್ಮನಪಾಳ್ಯ ಮುಖ್ಯ ರಸ್ತೆಯ ಅಂಬೇಡ್ಕರ್ ಸರ್ಕಲ್, ಸೋಮಸುಂದರಪಾಳ್ಯ ಸರ್ಕಲ್, ಉಟ್ಟಾಲ್ ಫ್ಯಾಕ್ಟರಿ ಹತ್ತಿರ ಬೆಳಿಗ್ಗೆ ಮತ್ತು ಸಂಜೆ ಈ ರಸ್ತೆಗಳಲ್ಲಿ ಸಂಚಾರ ದಟ್ಟಣೆಯಾಗುತ್ತಿದ್ದು, ಸದರಿ ರಸ್ತೆಗಳಲ್ಲಿ ಸಂಚಾರ ನಿಯಂತ್ರಿಸಲು ಸಂಚಾರಿ ಪೋಲಿಸ್ ಇಲಾಖೆಯು ಸಿಬ್ಬಂದಿಯನ್ನು ನಿಯೋಜಿಸಿರುವುದಿಲ್ಲ. ಕೆಲವು ಸಲ ಕಾನೂನು ಸುವ್ಯವಸ್ಥೆ ಪೋಲಿಸ್ ಸಿಬ್ಬಂದಿಗಳು ಸಂಚಾರ ನಿಯಂತ್ರಿಸುತ್ತಾರೆ ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಹಾಜರಿದ್ದ, ಶ್ರೀ ಶ್ರೀನಿವಾಸ್ ರೆಡ್ಡಿ, ಚಂದ್ರರೆಡ್ಡಿ, ಗೋಪಿನಾಥ ಮತ್ತು ಶ್ರೀ ಮೌಲಸಬ್ ರವರು ಪ್ರಸ್ತಾಪಿಸಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ಸಿರಾಜ್ ಅಹಮ್ಮದ, ಎ.ಎಸ್.ಐ ಸಂಚಾರಿ ಪೋಲಿಸ್ ಠಾಣೆ ಎಲೆಕ್ಟ್ರಾನಿಕ್ ಸಿಟಿ ರವರು ಸಿಬ್ಬಂದಿಯನ್ನು ನಿಯೋಜಿಸಲು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದೆಂದು ಸಭೆಯಲ್ಲಿ ತಿಳಿಸಿರುತಾರೆ.

- **<u>ಪಶುಸಂಗೋಪನೆ ಇಲಾಖೆ :-</u>**

1. ಶ್ರೀ ಶ್ರೀಧರ ಎನ್. ಪಶುಸಂಗೋಪನೆ ಇನ್ಸ್‌ಪೆಕ್ಟರ್ ರವರು ವರ್ಗಾವಣೆಗೊಂಡು, ಇತ್ತೀಚೆಗೆ ಕರ್ತವ್ಯಕ್ಕೆ ಹಾಜರಾಗಿದ್ದು, ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಾಗಿರುತ್ತಾರೆ. ಈ ಸಂಬಂಧ ನೋಡಲ್ ಅಧಿಕಾರಿಗಳು ಮುಂದಿನ ಸಭೆಗೆ ಸಂಪೂರ್ಣ ಮಾಹಿತಿ ಪಡೆದುಕೊಂಡು ಸಭೆಗೆ ಹಾಜರಾಗುವಂತೆ ಸೂಚಿಸಿರುತ್ತಾರೆ.

- **<u>ಬೀದಿ ದೀಪ (ವಿದ್ಯುತ್) :-</u>**

1. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ತಿಳಿಸಿ ಸಂಜೆ ವೇಳೆ 6.00 ಗಂಟೆ ನಂತರ ಅವಶ್ಯಕವಿರುವ ಸ್ಥಳದಲ್ಲಿ ಆದ್ಯತೆ ಮೇರೆಗೆ ಬೀದಿ ದೀಪಗಳನ್ನು ಅಳವಡಿಸಲು ಶ್ರೀ ಗೋಪಿನಾಥ ರವರು ಸಭೆಗೆ ತಿಳಿಸಿದರು.

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸುತ್ತಾ, ಸಭೆಯಲ್ಲಿದ್ದ ಎಲ್ಲಾ ಸದಸ್ಯರಿಗೆ, ಸಾರ್ವಜನಿಕರಿಗೆ ಮತ್ತು ಅಧಿಕಾರಿ ಸಿಬ್ಬಂದಿ ವರ್ಗದವರಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ, ವಾರ್ಡ್ ನಂ.190ರ
ಸಹಾಯಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ ವಾರ್ಡ್ ನಂ.190
ಮಂಗಮ್ಮನಪಾಳ್ಯ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**<u>ಪ್ರತಿಯನ್ನು:-</u>**

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಆಪ್ತ ಶಾಖೆಗೆ ಸಲ್ಲಿಸಿದೆ
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಆಪ್ತ ಶಾಖೆಗೆ ಸಲ್ಲಿಸಿದೆ
4. ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಆಪ್ತ ಶಾಖೆಗೆ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.

Scanned with